ಜಿಲ್ಲೆಗೆ ಸೀಮಿತವಾದಂಥದ್ದನ್ನು ಕೊಡಲಿಕ್ಕೆ ವ್ಯವಸ್ಥೆ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅವಧಿ ವಿಸ್ತರಣೆ ಮಾಡುವುದರ ಜೊತೆಗೆ, ಟರ್ಮ್ಸ್ ಆಫ್ ರೆಫರೆನ್ಸ್‌ನಲ್ಲಿ ತಾವು ಬೇರೆ ಜಿಲ್ಲೆಗಳಿಗೆ ಕೂಡ ಬೇರೆ ಬೇರೆ ಗ್ರೂಪ್ ಮಾಡಿಕೊಂಡು ಹೋಗಿಬರುವುದಕ್ಕೆ ತಾವು ಅವಕಾಶ ಕೊಡಬೇಕು. ಏಕೆಂದರೆ ಪೂರ್ತಿ ಮಾಹಿತಿಯನ್ನು ಪಡೆದುಕೊಳ್ಳದೆ ರಿಪೋರ್ಟ್ ಕೊಡುವುದಕ್ಕೆ ಆಗುವುದಿಲ್ಲ. ಈ ತಿಂಗಳ 23ನೇ ತಾರೀಖು ನಾವು ಮಧ್ಯಂತರ ವರದಿಯನ್ನು ಕೊಡುತ್ತೇವೆ.

ಉಪಾಧ್ಯಕ್ಷರು : ಈಗ ರಾಜ್ಯದಾದ್ಯಂತ ಬೆಳೆಗಳು ನಾಶವಾಗಿ, ರೈತರು ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ ಪರಿಶೀಲಿಸಿ ವರದಿಯನ್ನು ನೀಡಲು ರಚಿಸಲಾದ ಜಂಟಿ ಸದನ ಸಮಿತಿಯ ವರದಿಯನ್ನು ಒಪ್ಪಿಸಲು 11ನೇ ಮೇ 1998ರವರೆಗೆ ಕಾಲಾವಧಿಯನ್ನು ವಿಸ್ತರಿಸಲಾಗಿದೆ ಮತ್ತು ಮಧ್ಯಂತರ ವರದಿಯನ್ನು 23ನೇ ತಾರೀಖಿನೊಳಗಾಗಿ ಸಲ್ಲಿಸತಕ್ಕದ್ದು.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರ, ವಾರ್ತಾ ಮತ್ತು ಪ್ರಚಾರ ಸಚಿವರು) (ಶ್ರೀ ಹೆಚ್. ನಾಗಪ್ಪ, ಕೃಷಿ ಮಾರುಕಟ್ಟೆ ರಾಜ್ಯ ಸಚಿವರ ಪರವಾಗಿ) : ಮಾನ್ಯ ಉಪಾಧ್ಯಕ್ಷರೆ, ಭಾರತ ಸಂವಿಧಾನದ 213(2)ನೇ ಅನುಚ್ಛೇದದ ಮೇರೆಗೆ 1998ರ ಕರ್ನಾಟಕ ಕೃಷಿ ಮಾರುಕಟ್ಟೆ ನಿಯಂತ್ರಣ ತಿದ್ದುಪಡಿಗೆ ಸಂಬಂಧಿಸಿದಂತೆ ದಿನಾಂಕ 31-3-1998ರಲ್ಲಿ ಹೊರಡಿಸಲಾದ 17, ಶಾಸನ 98ನೇ ಕ್ರಮಾಂಕದ ಅಧಿಸೂಚನೆಯನ್ನು ಮಂಡಿಸುತ್ತೇನೆ.

ಉಪಾಧ್ಯಕ್ಷರು : ಮಂಡಿಸಲಾಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕಾರ್ಯಕಲಾಪಗಳ ಪಟ್ಟಿಯಲ್ಲಿ ಅಲ್ಪಾಕಾಲಾವಧಿ ಚರ್ಚೆಯನ್ನು ಕೊನೆಯಲ್ಲಿ ಹಾಕಿದ್ದೀರಿ, ಇದರಲ್ಲಿ ಕಾವೇರಿ ಜಲ ವಿವಾದ ಕುರಿತಂತೆ ಬಹಳ ಮಹತ್ವ ಇರುವುದರಿಂದ ಇದನ್ನು ಮೊದಲು ತೆಗೆದುಕೊಂಡು ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಉಪಾಧ್ಯಕ್ಷರು : ಮೊದಲು ಬೇಡಿಕೆಗಳ ಮೇಲೆ ಚರ್ಚೆ ಆಗಲಿ. ನೆನ್ನೆ ದಿವಸ ಈ ವಿಷಯದ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ, ಆದ್ದರಿಂದ ಅಜೆಂಡಾ ಪ್ರಕಾರ ಹೋಗೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಈಗಾಗಲೇ ನೋಟೀಸನ್ನು ಕೊಟ್ಟಿದ್ದೇನೆ. ಕಾವೇರಿ ಜಲ ವಿವಾದ ಕುರಿತಂತೆ ಕರ್ನಾಟಕದೊಂದಿಗೆ ಇನ್ನು ಮುಂದೆ ಯಾವುದೇ ರೀತಿಯ ಮಾತುಕತೆ ನಡೆಸುವುದಿಲ್ಲವೆಂಬ ತಮಿಳುನಾಡು ಮುಖ್ಯಮಂತ್ರಿಯವರ ಹೇಳಿಕೆಯಿಂದ ಉದ್ಭವಿಸಿರುವ ಪರಿಸ್ಥಿತಿಯ ಬಗ್ಗೆ ಶೂನ್ಯ ವೇಳೆಯಲ್ಲಿ ಚರ್ಚೆ ನಡೆಸುವುದು ವಿಶದ. ವಿವರವಾದ ಚರ್ಚೆಗೆ ನಾಳೆ ಪ್ರತ್ಯೇಕ ಕಾಲದಲ್ಲಿ ನಿಗದಿ ಪಡಿಸುವುದಾಗಿ ತಾವು ಆಶ್ವಾಸನೆಯನ್ನು ನೀಡಿದ್ದೀರಿ. ಅದರಂತೆ ತಾವು ಈ ವಿಷಯದ ಬಗ್ಗೆ ಪ್ರತ್ಯೇಕ ಚರ್ಚೆಗೆ ನಾಳೆ ಕಾರ್ಯಕಲಾಪಗಳ ಪಟ್ಟಿಯಲ್ಲಿ ನಮೂದಿಸಿ ಅವಕಾಶ ಮಾಡಿಕೊಡಬೇಕೆಂದು ಕೋರುತ್ತೇನೆ ಎಂದು ಪತ್ರವನ್ನು ಬರೆದು ಕೊಟ್ಟಿದ್ದೇನೆ.

ಉಪಾಧ್ಯಕ್ಷರು : ಕಾರ್ಯಕಲಾಪಗಳ ಪಟ್ಟಿಯಲ್ಲಿ ಅವಕಾಶ ಮಾಡಿಕೊಟ್ಟಿದ್ದೀನಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕಾರ್ಯಕಲಾಪಗಳ ಪಟ್ಟಿಯಲ್ಲಿ ಕೊನೆಗೆ ಹಾಕಿದ್ದೀರಿ, ಇದು ಬಹಳ ಮಹತ್ವವಾದ ವಿಷಯವಾಗಿರುವುದರಿಂದ ಈಗಲೇ ಚರ್ಚೆಗೆ ಅವಕಾಶ ಮಾಡಿಕೊಡಿ.

ಉಪಾಧ್ಯಕ್ಷರು : ಇವತ್ತು ನಾಲ್ಕು ಬೇಡಿಕೆಗಳ ಬಗ್ಗೆ ಚರ್ಚೆ ಇದೆ, ಅದು ಮುಗಿದ ಮೇಲೆ ಇದನ್ನು ತೆಗೆದುಕೊಳ್ಳೋಣ. ಆದ್ದರಿಂದ ಅಜೆಂಡಾ ಪ್ರಕಾರ ಹೋಗೋಣ, ಇವತ್ತು ಎಷ್ಟೇ ಸಮಯವಾದರು ಕುಳಿತುಕೊಳ್ಳೋಣ.

ಶ್ರೀ ಕೆ. ಎನ್. ನಾಗೇಗೌಡ (ಭಾರೀ ನೀರಾವರಿ ಸಚಿವರು) : ಮಾನ್ಯ ವಿರೋಧಪಕ್ಷದ ನಾಯಕರು ಇದು ಮಹತ್ವಪೂರ್ಣವಾದ ವಿಷಯವಾಗಿರುವುದರಿಂದ ಕೊನೆಗೆ ತೆಗೆದುಕೊಳ್ಳುವುದು ಬೇಡ; ಈಗಲೇ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ, ಇದಕ್ಕೆ ನಮ್ಮ ಅಭ್ಯಂತರ ಏನೂ ಇಲ್ಲ, ಯಾವಾಗ ಬೇಕಾದರೂ ತೆಗೆದುಕೊಳ್ಳಬಹುದು.

ಶ್ರೀ ಹೆಚ್. ಎನ್. ನಂಜೇಗೌಡ : ಜನ ನಮ್ಮನ್ನು ಕಾದು ನೋಡುತ್ತಿರುತ್ತಾರೆ. ಯಾವ ವಿಷಯಕ್ಕೆ ಎಷ್ಟು ಪ್ರಾಮುಖ್ಯತೆ ಕೊಡುತ್ತಾರೆ ಎನ್ನುವುದು ಜನರ ದೃಷ್ಟಿಯಿಂದ ಬಹಳ ಮುಖ್ಯವಾದುದು.

ಉಪಾಧ್ಯಕ್ಷರು : ಶೂನ್ಯವೇಳೆಯಲ್ಲಿ ತೆಗೆದುಕೊಂಡಿರುವ ಪ್ರಶ್ನೆಯನ್ನು ನಾವು ಎಲ್ಲರೂ ಚರ್ಚೆ ಮಾಡಿದ್ದೇವೆ. ನಿನ್ನೆ ಶೂನ್ಯ ವೇಳೆಯಲ್ಲಿ ಶ್ರೀರಾಮರೆಡ್ಡಿಯವರು ಎತ್ತಿದ ಪ್ರಶ್ನೆಗೆ ಎರಡು ಗಂಟೆ ಮಾತನಾಡಿದ್ದಾರೆ.

ಶ್ರೀ ಹೆಚ್. ಎನ್. ನಂಜೇಗೌಡ (ಬಸವನಗುಡಿ) : ನಿನ್ನೆ ಆಗಿರುವ ಚರ್ಚೆ ಬೇರೆ, ಇವತ್ತು ಆಗಬೇಕಾಗಿರುವ ಚರ್ಚೆ ಬೇರೆ. ಇದು ನಮ್ಮ ರಾಜ್ಯದ ಬಗ್ಗೆ ಅಷ್ಟೇ ಅಲ್ಲ, ಪಕ್ಕದ ರಾಜ್ಯದವರೂ ಕೂಡ ನಮ್ಮನ್ನು ವಾಚ್ ಮಾಡುತ್ತಿರುತ್ತಾರೆ. ಯಾವ ವಿಚಾರಕ್ಕೆ ಎಷ್ಟು ಮಹತ್ವ ಕೊಡುತ್ತಾರೆ, ಎಷ್ಟು ಪ್ರಾಮುಖ್ಯತೆ ಕೊಡುತ್ತಾರೆ ಎಂದು. ಆ ವಿಚಾರದ ಬಗ್ಗೆ ಮತ್ತು ಅದರ ಪ್ರಾಮುಖ್ಯತೆಯ ಬಗ್ಗೆ ನಮಗೆ ಅರಿವು ಆಗಿದೆ ಎನ್ನುವುದು ಗೊತ್ತಾಗಬೇಕಾದರೆ, ನಾನು ಇವತ್ತು ಪ್ರಶ್ನೋತ್ತರ ಸಮಯವನ್ನು ತೆಗೆದು ಹಾಕಬೇಕೆಂದು ಹೇಳುವವನು ಇದ್ದೆ. ಆ ರೀತಿ ಮಾಡಿದರೆ ಪ್ರಿಸಿಡೆಂಟ್ ಆಗುತ್ತದೆ. ಪ್ರಶ್ನೋತ್ತರ ವೇಳೆ ಮುಗಿದ ಮೇಲೆ ತೆಗೆದುಕೊಳ್ಳಬೇಕಾಗಿದ್ದು ಬಹಳ ಪ್ರಾಮುಖ್ಯವಾದ ವಿಚಾರ. ದಯಮಾಡಿ ಇದರ ಬಗ್ಗೆ ಚರ್ಚೆ ನಡೆಯಲಿ, ತಾವು ಇದಕ್ಕೆ ಅಡ್ಡಿಪಡಿಸಬೇಡಿ, ಇದನ್ನು ಸದನ ಒಪ್ಪಿಕೊಳ್ಳುತ್ತದೆ. ಆ ಕಡೆ ಸದಸ್ಯರು, ಈ ಕಡೆಯ ಸದಸ್ಯರು ಒಪ್ಪಿಕೊಳ್ಳುತ್ತಾರೆ, ಇದಕ್ಕೆ ಸರ್ಕಾರ ಕೂಡ ತಯಾರಿದೆ. ದಯಮಾಡಿ ತಾವು ಇದಕ್ಕೆ ಅನುವು ಮಾಡಿಕೊಡಬೇಕು.

ಉಪಾಧ್ಯಕ್ಷರು : ಗಮನ ಸೆಳೆಯುವ ಸೂಚನೆ ಇದೆ, ಅದನ್ನು ಮುಗಿಸಿದ ಮೇಲೆ ತೆಗೆದುಕೊಳ್ಳೋಣ ಹೇಗೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಗಮನ ಸೆಳೆಯುವ ಸೂಚನೆಯನ್ನು ಆಮೇಲೆ ತೆಗೆದುಕೊಳ್ಳಿ, ಏಕೆಂದರೆ, ಇದು ಬಹಳ ಮಹತ್ವವಾದ ವಿಚಾರ ಇರುವುದರಿಂದ ಇದನ್ನು ಮೊದಲು ಚರ್ಚೆ ಮಾಡೋಣ.

ಉಪಾಧ್ಯಕ್ಷರು : ಇದಕ್ಕೆ ಕನಿಷ್ಟ ಎರಡರಿಂದ ಮೂರು ಗಂಟೆ ಸಮಯ ಬೇಕಾಗಬಹುದು ಅದಕ್ಕಾಗಿ ಊಟವಾದ ಮೇಲೆ ಇದನ್ನು ಚರ್ಚೆಗೆ ತೆಗೆದುಕೊಳ್ಳುವುದು ಸೂಕ್ತ. ಈಗ ಸದನವನ್ನು ಮುಂದೂಡುತ್ತಿದ್ದೇನೆ.

(ಸದನವು 1.20ಕ್ಕೆ ಮುಂದೂಡಲ್ಪಟ್ಟು ಪುನಃ 2-30ಕ್ಕೆ ಸೇರಲು ನಿಶ್ಚಯಿಸಿತು.)

ಸದನವು ಮಧ್ಯಾಹ್ನ ಪುನಃ 2.50ಕ್ಕೆ ಸಮಾವೇಶಗೊಂಡಿತು.

(ಉಪಾಧ್ಯಕ್ಷರಾದ ಶ್ರೀ ಚಂದ್ರಶೇಖರ ಮಾಮನಿಯವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು.)

ನಿಯಮ 69ರ ಮೇರೆಗೆ ಅಲ್ಪಕಾಲಾವಧಿ ಚರ್ಚೆ

ಕಾವೇರಿ ಜಲ ವಿವಾದ ಕುರಿತಂತೆ ತಮಿಳುನಾಡು ಮುಖ್ಯಮಂತ್ರಿಯವರ ಹೇಳಿಕೆಯಿಂದ ಉದ್ಭವಿಸಿರುವ ಪರಿಸ್ಥಿತಿಯ ಬಗ್ಗೆ ಪ್ರಸ್ತಾಪ

+ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೆ, ಈ ಗತಿ ಎರಡನೆಯ ದಿವಸಕ್ಕೆ ಬಂತು. ಮಾನ್ಯ ಮುಖ್ಯಮಂತ್ರಿಗಳು ಯಾತ್ರೆಗೆ ಹೋಗಿದ್ದಾರೇನು? ಅವರ ಜೊತೆಯಲ್ಲಿ ಎಲ್ಲಾ ಮಂತ್ರಿಗಳು ಹೋಗಿರಬಹುದು. ಮಾನ್ಯ ನಾಗೇಗೌಡರು ಒಬ್ಬರನ್ನು ಬಿಟ್ಟರೆ ಎಲ್ಲರೂ ಹೋಗಿದ್ದಾರೆ. ನಾಗೇಗೌಡರು ಬಾರಿ ನೀರಾವರಿ ಸಚಿವರು ಎಲ್ಲರಿಗೂ ನೀರು ಬಿಡುವವರು. ಇವತ್ತು ನಾವು ಪ್ರಸ್ತಾಪ ಮಾಡತಕ್ಕ ವಿಷಯ ಬಹಳ ಮಹತ್ವದ್ದು, ಬಹಳ ಗಂಭೀರವಾದ ವಿಷಯ. ನಿನ್ನೆ ಇದನ್ನು ಶೂನ್ಯವೇಳೆಯಲ್ಲಿ ಅನೇಕ ನಮ್ಮ ಮಿತ್ರರು ಪ್ರಸ್ತಾಪ ಮಾಡಿದ್ದಾರೆ. ಆದರೆ ಈ ವಿಷಯದ ಮಹತ್ವವನ್ನು ಅರಿತುಕೊಂಡು ತಾವು ಪ್ರತ್ಯೇಕವಾದ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆಂದು ಹೇಳಿದ ಮೇಲೆ ಅದೇ ರೀತಿ ತಾವು ಅವಕಾಶ ಕೊಟ್ಟಿದ್ದೀರಿ. ಅದಕ್ಕಾಗಿ ನಾನು ತಮಗೆ ಅಭಿನಂದಿಸುತ್ತೇನೆ. ಈ ವಿಷಯವನ್ನು ಆಧ್ಯತೆಯ ಮೇಲೆ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿ ಕೊಟ್ಟಿದ್ದೀರಿ ಅದಕ್ಕೆ ನಾನು ಮತ್ತೊಮ್ಮೆ ವಂದಿಸುತ್ತೇನೆ. ಪ್ರಮುಖವಾಗಿ ನಮ್ಮ ಮುಂದಿರತಕ್ಕದ್ದು ಏನೆಂದರೆ, ಏಕೆ ಈ ವಿಷಯ ಉದ್ಭವಿಸಿದೆ ಅಂದರೆ ತಮಿಳು ನಾಡಿನ ಮುಖ್ಯಮಂತ್ರಿಗಳಾದ ಎಂ. ಕರುಣಾನಿಧಿಯವರು ಒಂದು ಹೇಳಿಕೆಯನ್ನು ನಿನ್ನೆ ಕೊಟ್ಟಿದ್ದಾರೆ. ಇದರ ಹಿಂದೆ ಏನು ನಡೆಯಿತು ಆ ವಿಷಯಕ್ಕೆ ಆಮೇಲೆ ಬರುತ್ತೇನೆ. ಆದರೆ ಕರುಣಾನಿಧಿಯವರು ನಮ್ಮ ಮುಖ್ಯಮಂತ್ರಿಗಳ ಪ್ರೀತಿಗೆ ಪಾತ್ರರಾದವರು ಅಲ್ಲದೆ ವೈಯಕ್ತಿಕವಾಗಿ ಮಿತ್ರರು. ಆಮೇಲೆ ಸಂಯುಕ್ತ ರಂಗದಲ್ಲಿ ಒಂದು ಕಡೆ ಇದ್ದು ರಾಜಕೀಯ ಮಾಡಿ ನಾವು ಬಹಳ ಚೆನ್ನಾಗಿದ್ದೇವೆ. ಕಾವೇರಿ ಜಲ ವಿವಾದವನ್ನು ಇತ್ಯರ್ಥ ಮಾಡುವುದಕ್ಕೆ ಸೌಹಾರ್ದಯುತವಾದ ಮಾತುಕತೆ ನಡೆಸುತ್ತೇವೆ, ಅದರಲ್ಲಿ ಯಶಸ್ವಿಯಾಗುತ್ತೇವೆಂದು ಅನೇಕ ಸಾರಿ ಈ ಸದನದಲ್ಲಿ ಪ್ರಸ್ತಾಪ ಮಾಡಿ ಅದನ್ನು ಸಮರ್ಥನೆ ಕೂಡ ಮಾಡಿದ್ದಾರೆ. ಸಮರ್ಥನೆ ಮಾಡಿಕೊಳ್ಳುವುದು ಅಷ್ಟೇ ಅಲ್ಲ, ನೀವು ಮೋಸ ಹೋಗುತ್ತೀರಿ ಅವರನ್ನು ನಂಬಬೇಡಿಯೆಂದೂ ನೀವು ಏನಾದರೂ ಒಂದು ಇತ್ಯರ್ಥಕ್ಕೆ